MYSORE LEGISLATIVE ASSEMBLY

Thursday, 24th February 1966

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Sanction of Irrigation Bills

*Q.—16. SRI K. LAKKAPPA (Hebbur):—

Will the Government be pleased to state :—

(*a*) the number of irrigation wells sanctioned by the Taluk Board, Koratagere in Tumkur District during 1963-64 and up-to-date;

(*b*) the number of applications received for such loan by the above Taluk board during the above period ;

(*c*) whether the Taluk Board has prepared any priority lists of the applicants who applied for the loan ;

(*d*) if not, the principle followed by the Taluk Board in sanctioning the loan ?

A.—SRI M. V. KRISHNAPPA (Minister for Revenue).—

	Year	*Liberalised scheme*	*C. D. P.*
(*a*)	1963-64	17	31
	1964-65	99	31
	1965-66	—	14
	Total	116	76
(*b*)	1963-64	197	
	1964-65	56	
	1965-66	128	

(*c*) The list of loan applications is prepared and placed before the loan sub-committee for selection. The loan sub-committee wil select the deserving cases according to priority, Hobliwise and Circlewise.

(*d*) Does not arise in view of reply to clause (*c*).

ಶ್ರೀ ಕೆ. ಲಕ್ಕಪ್ಪ.—63-64ನೇ ಸಾಲಿನಲ್ಲಿ ಬಾವಿಗಳಿಗಾಗಿ 197 ಅರ್ಜಿಗಳು ಬಂದಿದ್ದರಲ್ಲಿ ಎಷ್ಟು ಸರ್ಕಾರದಿಂದ ಮಂಜೂರಾದವು ?

†ಶ್ರೀ ಎಂ. ವಿ. ಕೃಷ್ಣಪ್ಪ.—17 ಬಾವಿಗಳು ಲಬರಲೈಸ್ಡ್ ಸ್ಕೀಂ ಪ್ರಕಾರ ಮಂಜೂರಾಗಿವೆ ಮತ್ತು 31 ಬಾವಿಗಳನ್ನು ಕಮ್ಯೂನಿಟಿ ಡೆವಲಪ್‌ಮೆಂಟು ಪ್ರಾಜೆಕ್ಟುಗಳ ಮೂಲಕ ಮಂಜೂರು ಮಾಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—63-64ರಲ್ಲಿ ಬಾವಿಗಳನ್ನು ಮಂಜೂರು ಮಾಡದೇ ಇರುವವರಿಗೆ 64-65 ರಲ್ಲಿ ಕೂಡ ಬಾವಿಗಳನ್ನು ಮಂಜೂರು ಮಾಡದೆ ಇತರರಿಗೆ ಬಾವಿಗಳನ್ನು ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರಕಾರದವರು ಇದನ್ನು ತಾಲ್ಲೂಕಾ ಬೋರ್ಡುಗಳಿಗೆ ವಹಿಸಿಬಿಟ್ಟಿದ್ದಾರೆ ಮತ್ತು ಈ ಬೋರ್ಡಿನವರು ಸರಕಾರಕ್ಕೆ ಇಷ್ಟು ಬಾವಿಗಳು ಬೇಕೆಂದು ಸರಕಾರಕ್ಕೆ ತಿಳಿಸುತ್ತಾರೆ. ಅದಕ್ಕಾಗಿ ಅವರೇ ಒಂದು ಕಮಿಟಿ ಮಾಡಿಕೊಂಡು ಹೋಬಳಿವೈಸು, ಸರ್ಕಲ್‌ವೈಸು ಎಂದು ಬಾವಿಗಳನ್ನು ಹಂಚುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಈ ಕಮಿಟಿಯವರು ಯಾರು ಬಾವಿಗಳನ್ನು ಕಟ್ಟಿರುವುದಿಲ್ಲವೋ ಅಂತಹ ವರಿಗೇ ಬಾವಿಗಾಗಿ ಸಾಲದ ಹಣವನ್ನು ಕೊಡುತ್ತ ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಲಬರಲೈಸ್ಡ್ ಸ್ಕೀಂ ಪ್ರಕಾರ ಈಗ ಸುಮಾರು 42,000 ಬಾವಿಗಳನ್ನು ಮಂಜೂರು ಮಾಡಿದ್ದೇವೆ. ಆದರಲ್ಲಿ ಎಲ್ಲೋ ಕೆಲವು ಹಣ ತೆಗೆದುಕೊಂಡಿದ್ದರೂ ಕಾರಣಾಂತರಗಳಿಂದ ಬಾವಿಗಳನ್ನು ಕಟ್ಟದೇ ಇರಬಹುದು. ಆದರೆ ಇಲ್ಲಿ ಅನೇಕ ಮಾನ್ಯ ಸದಸ್ಯರುಗಳು ಬಾವಿಗಳನ್ನು ಜನಕ್ಕೆ ಹೆಚ್ಚಾಗಿ ಕೊಡಬೇಕೆಂದು ಹೇಳುತ್ತಿದ್ದುದರಿಂದ ಈ ಲಬರಲೈಸ್ಡ್ ಸ್ಕೀಂ ಪ್ರಕಾರ ಬಾವಿಗಳನ್ನು ಹೆಚ್ಚಾಗಿ ಕೊಡುತ್ತಿದ್ದೇವೆ ವಿನಃ ಈಗ ಇದು ಎಲ್ಲ ಕಡೆ ಗಳಲ್ಲಿಯೂ ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ಇನ್ನು ಮುಂದೆ ಬಾವಿಗಳಿಗೆ ಹೆಚ್ಚು ಹಣ ಕೊಡಲು ಅನುಕೂಲವಾಗುವಂತೆ ಲ್ಯಾಂಡ್ ಇಂಪ್ರೂವ್‌ಮೆಂಟು ಬ್ಯಾಂಕು ಎಂದು ಮಾಡಿ ಅದರ ಮೂಲಕ ಹೆಚ್ಚು ಹಣ ಕೊಡಲು ಏರ್ಪಾಡು ಮಾಡಲಾಗಿದೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ತಾವು ತಾಲ್ಲೂಕ್ ಬೋರ್ಡು ಮೂಲಕ ಬಾವಿಗಾಗಿ 3,000 ಎಂದು ಕೊಡುತ್ತಿದ್ದ ಹಣವನ್ನು ಈಗ ಲ್ಯಾಂಡ್ ಇಂಪ್ರೂವ್‌ಮೆಂಟು ಬ್ಯಾಂಕು ಮೂಲಕ 5,000 ರಷ್ಟು ಕೊಡಲು ಏರ್ಪಾಡು ಮಾಡಲಾಗಿದೆ ಎಂದು ಹೇಳಿದಿರಿ. ಆದರೆ ಈಗ ಹಿಂದೆ ಬಾವಿಗಳಿಗಾಗಿ ಹಣ ತೆಗೆದುಕೊಂಡು ಅವುಗಳ ಕೆಲಸ ಪೂರ್ತಿ ಮಾಡಲು ಕಟ್ಟಡದ ಕಾರ್ಮಿಕರ ಈಚೆಗೆ ಬಹಳ ಪ್ರಾಸ್ತಿಯಾಗಿರುವುದರಿಂದ ಅವುಗಳನ್ನು ಕಟ್ಟದೇ ಇರುವಂಥ ನಿದರ್ಶನಗಳು ಅನೇಕ ಕಡೆ ಇವೆ. ಅಂತಹ ಭಾಗಗಳಲ್ಲಿ 2,000ರಷ್ಟು ಮೊದಲು ಸಾಲವಾಗಿ ಕೊಟ್ಟಿದ್ದರೂ ಅದರ ಜೊತೆಗೆ ಪುನಃ 5,000 ರವರೆಗೆ ಸಾಲದ ಹಣ ಹೆಚ್ಚು ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದನ್ನು ಸರಕಾರ ಯೋಚನೆ ಮಾಡಿಯೇ ಈಗ ಯಾವ ಯಾವ ಭಾಗದಲ್ಲಿ ಇನ್‌ಕಂಪ್ಲೀಟ್ ವರ್ಕ್ಸ್‌ಗಳು ಇವೆ. ಅಂತಹ ಕಡೆಗಳಲ್ಲೆಲ್ಲಾ ಲಬರಲೈಸ್ಡ್ ಸ್ಕೀಂ ಪ್ರಕಾರ ಒಂದು ಜಿಲ್ಲಾ ಕಮಿಟಿ ಹಾಕಿ ಅವರಿಗೂ ಸಾಲವಾಗಿ ಹಣ ಕೊಟ್ಟು ಅಂತಹ ಬಾವಿಗಳನ್ನು ಪೂರ್ತಿ ಮಾಡಬೇಕೆಂದು ಈಚೆಗೆ ಸರಕಾರವು ಆರ್ಡರನ್ನು ಮಾಡಲಾಗಿದೆ. ಇದರಂತೆ 1960-61 ರಿಂದೀಚೆಗೆ ಯಾವ ಯಾವ ಕಡೆಗಳಲ್ಲಿ ಇನ್‌ಕಂಪ್ಲೀಟ್ ವರ್ಕ್ಸ್‌ಗಳಿವೆಯೋ ಅವನ್ನೆಲ್ಲಾ ಪೂರ್ತಿ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಸಚಿವರು ಹೇಳಿದಂತೆ ಲಬರಲೈಸ್ಡ್ ಸ್ಕೀಂ ಪ್ರಕಾರ ಬಾವಿಗಳನ್ನು ಕಟ್ಟಲು ಸಾಲವನ್ನು ಪಡೆದಿರುವವರಲ್ಲಿ ಶೇಕಡಾ ನೂರಕ್ಕೆ 50 ರಷ್ಟು ಜನ ಬಾವಿಗಳನ್ನು ಕಟ್ಟದೇ ಸಾಲವಾಗಿ ಹಣವನ್ನು ಪಡೆದು ದುರುಪಯೋಗ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಬಂದಿರುವ ವರದಿಯ ಪ್ರಕಾರ 42,000 ಬಾವಿಗಳನ್ನು ಮಾಡಬೇಕೆಂದು ಸಾಲ ಕೊಟ್ಟಿರುವುದರಲ್ಲಿ 36,000 ಬಾವಿಗಳ ಕೆಲಸ ಪೂರ್ತಿಯಾಗಿ ಆಗಿದೆ ಎಂದು ಇವೆ. ಇನ್ನೂ ಇದನ್ನು ಹೆಚ್ಚಾಗಿ ಮಾಡಬೇಕೆಂದು ಇದಕ್ಕಾಗಿ ಒಂದು ಕೋಟಿಯಷ್ಟು ಹಣ ಒದಗಿಸಬೇಕೆಂದು ಈ ಒಂದು ಸ್ಕೀಂ ಮಾಡಲಾಗಿದೆ. ಅದರಂತೆ ಈ ಫೆಬ್ರವರಿ ತಿಂಗಳಲ್ಲಿ ಒಂದು ಸರಕಾರಿ ಆರ್ಡರು ಕೂಡ ಆಗಿದೆ.

† indicates that the remarks or speeches have not been revised by the member concerned.

ಶ್ರೀ ಹೆಚ್. ಡಿ. ದೇವೇಗೌಡ.—ವೆಲ್ಸ್ ಸ್ಕೀಂನ್ನು ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕಿಗೆ ವಹಿಸಿರುವುದರಿಂದ ಪ್ರೈಮರಿ ಸಹಕಾರ ಸಂಘಗಳು ಬಾವಿಗಳಿಗಾಗಿ ಒಂದು ಲಿಸ್ಟನ್ನು ತಯಾರಿಸಿ ಜಿಲ್ಲಾಧಿಕಾರಿಗಳಿಗೆ ಮಂಜೂರಾತಿಗಾಗಿ ಕಳುಹಿಸುತ್ತಿದ್ದರೂ ಅವುಗಳು ಮಂಜೂರಾಗದೆ ವಾಪಸು ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುತ್ತಿರುವುದು ಹಿಂದೆ ಇದ್ದ ಹಳೆಯ ಆರ್ಡರು ಪ್ರಕಾರ ಇರಬಹುದು. ಈಗ ಆ ರೀತಿಯಾಗುವುದಿಲ್ಲ. ಇದಕ್ಕಾಗಿ ಲಿಬರಲೈಸ್ಡ್ ಸ್ಕೀಂ ಎಂದು ಮಾಡಿ ಜನಕ್ಕೆ ಅನುಕೂಲವಾಗ ವಂತೆ ಸಾಲಗಳು ಬಾವಿಗಾಗಿ ಸಿಗುವಂತೆ ಏರ್ಪಾಡು ಮಾಡಲಾಗಿದೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಈಗ ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕು ಮೂಲಕ ಬಾವಿಗಳಿಗಾಗಿ ಸಾಲ ಪಡೆಯುಲು ಮೊದಲ ಕಂತನ್ನು ಪಡೆದಿರುವವರು ಯಾರು ಪಡೆಯುವೇ ಇರುವವರು ಯಾರು ಎನ್ನುವುದಕ್ಕೆ ತಾಲ್ಲೂಕು ಬೋರ್ಡಿನವರು ಒಂದು ಪ್ರಯಾರಿಟಿ ಲಿಸ್ಟು ಎಂದು ಮಾಡುತ್ತಿದ್ದಾರೆ. ಇವರಲ್ಲಿ ಪೋಲಿಟಿಕಲ್ ಇನ್‌ಫ್ಲುಯೆನ್ಸ್ ಹಾಗೂ ಖಾಸಗೀ ಸನ್ನಿವೇಶಗಳಿಂದಾಗಿ ಜನಕ್ಕೆ ಬಾವಿಯ ಸಾಲಗಳು ಸರಿಯಾಗಿ ಸಿಗುತ್ತಿಲ್ಲ. ಅದಕ್ಕಾಗಿ ತಾಲ್ಲೂಕಿನಲ್ಲಿರುವ ತಹಶೀಲ್ದಾರರು, ಬಿ.ಡಿ.ಓ ಹಾಗೂ ಅಲ್ಲಿ ಇರುವ ಅಸಿಸ್ಟೆಂಟ್ ಇಂಜನೀಯರವರು ಇವರನ್ನೊಳಗೊಂಡ ಒಂದು ಕಮಿಟಿ ಮಾಡಿ ಅದರ ಮೂಲಕ ಹಂಚುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಹಳೆಯ ಸ್ಕೀಂ ಪ್ರಕಾರ ಆಗಿರಬಹುದು. ಈಗ ಹೊಸ ಸ್ಕೀಂ ಮಾಡಿರುವುದರಿಂದ ಮುಂದೆ ಇವೆಲ್ಲಾ ಸರಿ ಹೋಗುತ್ತವೆ.

ಶ್ರೀ ಕೆ ಲಕ್ಕಪ್ಪ —ತಾಲ್ಲೂಕುಗಳಲ್ಲಿ ಕೆಲವರು ಹಳೆಯ ಬಾವಿಗಳನ್ನು ತೋಡಿಸಿ ಹೊಸ ಬಾವಿಗಳನ್ನು ತೋಡಿಸಿ ಮುಗಿಸಲಾಗಿದೆ ಎಂದು ಸರಕಾರಕ್ಕೆ ಫೈನಲ್ ಬಿಲ್ಲುಗಳನ್ನು ಕೊಟ್ಟು ಸಾಲ ಪಡೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಬಾವಿ ಹಂಚುವುದರಲ್ಲಿ ಅಕ್ರಮಗಳಾಗಿವೆ ಎಂದು ತಮ್ಮ ಗಮನಕ್ಕೆ ತಂದರೆ ಅವರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ — ಕೆಲವು ಕಡೆಗಳಲ್ಲಿ ಅವರಿಗೆ ಪೆನಾಲ್ಟಿಗಳನ್ನು ವಿಧಿಸಿ ಅವರಿಂದ ಸಾಲದ ಹಣವನ್ನು ವಸೂಲಿ ಮಾಡಲಾಗಿದೆ. ನಿಮ್ಮ ಊರಿಗೂ ಕೂಡ ನಾನೇ ಬಂದಾಗ ಅನೇಕ ಕೇಸುಗಳು ಬಂದಿದ್ದವು. ಅವುಗಳನ್ನೆಲ್ಲಾ ಪರಿಶೀಲನೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳಲಾಗಿದೆ. ಎಲ್ಲಾ ಭಾಗಗಳಲ್ಲಿಯೂ ಈ ಸ್ಕೀಂನಿಂದ ಹಣ ದುರುಪಯೋಗವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರೂ ಇಂತಹ ಸ್ಕೀಂ ಮಾಡಬೇಕೆಂದು ಹೇಳುತ್ತಿದ್ದುದರಿಂದ ಅದಂತೆ ಜನಕ್ಕೆ ಅನುಕೂಲವಾಗಲಿ ಎಂದು ಈ ಲಿಬರಲೈಸ್ಡ್ ಸ್ಕೀಮನ್ನು ಜಾರಿಗೆ ತರಲಾಗಿದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ —ಕೆಲವು ಬಾವಿಗಳನ್ನು ತೆಗೆದು ಒಂದೆರಡು ಸಾರಿ ನೀರು ಬಂದು ಅವುಗಳನ್ನು ಪೂರ್ತಿ ಮಾಡುವುದರೊಳಗೆ ಹೆಚ್ಚು ನೀರು ಬಂದು ಕುಸಿದು ಹೋಗಿ ಕೆಲವು ನಿಂತು ಹೋಗಿವೆ, ಅಂತಹ ಬಾವಿಗಳನ್ನು ಪೂರ್ತಿ ಮಾಡುವುದಕ್ಕೆ ಸಹಾಯ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಸ್ಕೀಂ ಕ್ಲೋಸ್ ಮಾಡಿದ ಮೇಲೆ, ಹೊಸ ಸ್ಕೀಂನಲ್ಲಿ ಅರ್ಜಿಗಳನ್ನು ರಿಸೀವ್ ಮಾಡಬೇಕು. ಆಗ ಪ್ರಯಾರಿಟಿ ಲಿಸ್ಟ್ ಯಾವ ರೀತಿ ತಯಾರು ಮಾಡಬೇಕೆಂಬುದನ್ನು ತೀರ್ಮಾನ ಮಾಡಿದ್ದಾರೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಪ್ರಯಾರಿಟಿ ಲಿಸ್ಟ್ ಯಾವ ರೀತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಹೊಸ ಪ್ರಶ್ನೆ, ಈ ಪ್ರಶ್ನೆಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—42 ಸಾವಿರ ಬಾವಿಗಳಲ್ಲಿ ಆರು ಸಾವಿರ ಬಾವಿಗಳು ಅಪೂರ್ಣವಾಗಿವೆ. ಒಂದು ಕೋಟಿ ರೂಪಾಯಿ ಸಾಲ ಕೊಡುತ್ತೇವೆ ಎಂದು ಹೇಳಿದಿರಿ, ಆರು ಸಾವಿರ ಬಾವಿಗಳನ್ನು ಪೂರ್ಣವಾಡಬೇಕಾದರೆ ಒಂದು ಕೋಟಿ ರೂಪಾಯಿಗಳು ಸಾಕಾಗುತ್ತದೆ ಎಂದು ಯಾವ ಅಂಕಿಗಳ ಆಧಾರದ ಮೇಲೆ ಹೇಳೋಣವಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಆರು ಸಾವಿರ ಬಾವಿಗಳನ್ನು ನಾವು ಇದೇ ವರ್ಷ ಪೂರ್ಣವಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕು ಇಲ್ಲದೇ ಇದ್ದರೆ ಲ್ಯಾಪ್ಸ್ ಆಗುತ್ತದೆ. ಆರು ಸಾವಿರ ಬಾವಿಗಳು ಒಂದು, ಎರಡನೇ ಸ್ಟೇಜ್‌ನಲ್ಲಿ ಅಲ್ಲದೇ ವಿವಿಧ ಸ್ಟೇಜ್‌ಗಳಲ್ಲಿ ಇರುತ್ತವೆ. ಆದ್ದರಿಂದ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಬಹುಮಟ್ಟಿಗೆ ಬಾವಿಗಳನ್ನು ಮುಗಿಸಬಹುದು ಎಂದು ಮಾಡಿದ್ದೇವೆ. ಮುಗಿಯದೇ ಇದ್ದದ್ದನ್ನು ಮುಂದಿನ ವರ್ಷ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಳೇ ಸ್ಕೀಂನಲ್ಲಿ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಾ ಇದ್ದಿರಿ, ಅದರಲ್ಲಿ ಎಷ್ಟೂವರೆ ಸಾವಿರ ರೂಪಾಯಿ ಸಾಲ, 500 ರೂಪಾಯಿ ಸಬ್ಸಿಡಿ ಅದಕ್ಕೆ ಇರುತ್ತಾ ಇತ್ತು. ಹೊಸ ಸ್ಕೀಂ ಪ್ರಕಾರ ಐದು ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಇದರಲ್ಲಿ ಸಬ್ಸಿಡಿ ಹೇಗೆ ಕೊಡುತ್ತೀರಿ ಮತ್ತು ಇಂಟರೆಸ್ಟ್ ಹೇಗೆ ಚಾರ್ಜ್ ಮಾಡುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ರೋನ್ ಐದು ಸಾವಿರ ರೂಪಾಯಿ ಸಬ್ಸಿಡಿ 500 ರೂಪಾಯಿ ಇರುತ್ತದೆ ಎಂದು ಅವರು ಹೇಳುತ್ತಾ ಇರುವುದು ಹಳೇ ಸ್ಕೀಂ ಪ್ರಕಾರ. ಹೊಸ ಸ್ಕೀಂ ರ್ಯಾಂಡ್ ಮಾರ್ಗೇಜ್ ಬ್ಯಾಂಕ್ ನವರು ಬೇರೆ ರೀತಿಯಲ್ಲಿ ಮಾಡಿಕೊಂಡಿದ್ದಾರೆ, ಬೇರೆ ಒಂದು ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಉತ್ತರ ಹೇಳಬಹುದು.

Departmental Examinations

*Q.—76. Smt. G. C. BHAGEERATHAMMA (Tumkur).—

Will the Government be pleased to state.—

(*a*) whether it is a fact that Government servants should pass Departmental Examinations and Kannada Test as per the Rules framed by Government to earn increment and promotion;

(*b*) whether it is a fact that passing of Kannada Test by the officials is not being insisted to grant increments, as in the case of other Departmental Examinations;

(*c*) if so, the reasons therefor?

A.—Sri S. NIJALINGAPPA (Chief Minister).—

(*a*) Yes.

(*b*) Yes.

(*c*) Because Government have extended the time limit for passing the Kannada Test.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಮೂರೇ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸಂಬಂಧದಲ್ಲಿ ಗೊತ್ತು ಮಾಡಿದ್ದ ಕಾಲಮಿತಿಯನ್ನು ವಿಸ್ತರಿಸಿರುವುದರಿಂದ ಎಂದು ಹೇಳಿದ್ದೀರಿ, ಎಲ್ಲಿಯವರೆಗೂ ವಿಸ್ತರಿಸಿದ್ದೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಈ ವರ್ಷ ಮಾರ್ಚಿವರೆಗೂ ವಿಸ್ತರಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಕನ್ನಡ ಓದುವುದಕ್ಕೆ, ಬರೆಯುವುದಕ್ಕೆ ಬಾರದೇ ಇರತಕ್ಕ ನೌಕರರು ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಕ್ಯಾಟಗರಿಯಲ್ಲಿ ಎಷ್ಟೆಷ್ಟು ಜನ ಇದ್ದಾರೆ ಎನ್ನುವುದರ ಬಗ್ಗೆ ಏನಾದರೂ ಸರ್ಕಾರದವರು ಮಾಹಿತಿ ಪಡೆದಿದ್ದಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೊಂದು ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ರಾಜ್ಯಕ್ಕೆ ಹಂಚಲ್ಪಟ್ಟಂಥ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ನ ಅಧಿಕಾರಿಗಳೂ ಕೂಡ ಕನ್ನಡ ಕಲಿಯಬೇಕೆಂಬ ನಿರ್ಬಂಧವನ್ನು ಏನಾದರೂ ಹಾಕಲಾಗಿದೆಯೇ?

Sri S. NIJALINGAPPA.—I am not aware of it; I want notice.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅನೇಕ ಜನ ಐ. ಎ. ಎಸ್. ಅಧಿಕಾರಿಗಳು 'ಏ ಕ್ಯಾ ಹೈ', 'ಓ ಕ್ಯಾ ಹೈ' ಎನ್ನುತಕ್ಕ ಅಧಿಕಾರಿಗಳು ಡಿಸ್ಟ್ರಿಕ್ ಮತ್ತು ಸಬ್‌ಡಿವಿಜನ್ ಆಫೀಸರುಗಳಾಗಿದ್ದಾರೆ ಇದರಲ್ಲಿ ಕೆಲವರಿಗೆ ಮಾತ್ರ ಇಂಥ ಒಂದು ಒತ್ತಾಯವನ್ನು ಹಾಕಿ ಮತ್ತೆ ಕೆಲವರಿಗೆ ಒತ್ತಾಯವನ್ನು ಹಾಕದೇ ಇರುವುದಕ್ಕೆ ಕಾರಣವೇನು?